**ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ., ನರಗುಂದ.**

**ಉಪಸ್ಥಿತರುಃ ಶ್ರೀಮತಿ ಗಾಯತ್ರಿ. ಹೆಚ್.ಡಿ.,**

ಎಂ.ಎ., ಎಂ.ಫಿಲ್., ಎಲ್.ಎಲ್.ಎಂ

ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ, ನರಗುಂದ.

**ದಿನಾಂಕಃ 10 ನೇ ಜನವರಿ ಮಾಹೇ 2024**

**ಸಿ.ಸಿ.ನಂ.673/2022**

**ಪಿರ್ಯಾದಿದಾರರುಃ** ರಾಜ್ಯ ಸರಕಾರ ಪರ
ಪೊಲೀಸ ಉಪಾಧೀಕ್ಷಕರು
ನರಗುಂದ ಉಪ-ವಿಭಾಗ
ಗದಗ ಜಿಲ್ಲೆ.

**(ಮಾನ್ಯ ಸ.ಸ. ಅಭಿಯೋಜಕರು ಪ್ರತಿನಿಧಿಸಿದ್ದಾರೆ)**

**:: ವಿರುದ್ಧ ::**

**ಆರೋಪಿತರುಃ**

1) ಶಿವಾನಂದ ತಂದೆ ಯಲ್ಲಪ್ಪ ಮಾದರ
ವಯಾಃ 36 ವರ್ಷ, ಉಃ ಕೂಲಿ ಕೆಲಸ,

2) ನಂದೀಶ ತಂದೆ ದೇವಪ್ಪ ನರಗುಂದ
ವಯಾಃ 23 ವರ್ಷ, ಉಃ ಕೂಲಿ ಕೆಲಸ

3) ಸಂಜೀವ ತಂದೆ ಮರಿಯಪ್ಪ ಮಾದರ
ವಯಾಃ 24 ವರ್ಷ, ಉಃ ಲಾರಿ ಡ್ರೈವರ

4) ವಿಠ್ಠಲ ತಂದೆ ಭೀಮಪ್ಪ ಮಾದರ
ವಯಾಃ 25 ವರ್ಷ, ಉಃ ಕೂಲಿ ಕೆಲಸ

5) ನಾಗರಾಜ ತಂದೆ ಮುದಿಯಪ್ಪ @ ಮರಿಯಪ್ಪ ಮಾದರ
ವಯಾಃ 22 ವರ್ಷ, ಉಃ ಹಮಾಲಿ ಕೆಲಸ,

6) ಜಗದೀಶ ತಂದೆ ಭೀಮಪ್ಪ ಮಾದರ
ವಯಾಃ 40 ವರ್ಷ, ಉಃ ಒಕ್ಕಲುತನ,

7) ಸಿದ್ದಪ್ಪ ತಂದೆ ಫಕ್ಕೀರಪ್ಪ ಮಾದರ
ವಯಾಃ 62 ವರ್ಷ, ಉಃ ಕೂಲಿ ಕೆಲಸ,

8) ಚಿದಾನಂದ ತಂದೆ ಹನಮಪ್ಪ ಮಾದರ
ವಯಾಃ 36 ವರ್ಷ, ಉಃ ಕೂಲಿ ಕೆಲಸ.

9) ರವಿ ತಂದೆ ಸ್ವಾರೆಪ್ಪ ಮಾದರ
ವಯಾಃ 24 ವರ್ಷ, ಉಃ ಕೂಲಿ ಕೆಲಸ,

10) ಮುತ್ತಪ್ಪ @ ನಾಗಪ್ಪ ತಂದೆ ಸ್ವಾರೆಪ್ಪ @ ಶಿವಾನಂದ ಪೂಜಾರ.
ವಯಾಃ 31 ವರ್ಷ, ಉಃ ಕೂಲಿ ಕೆಲಸ,

11) ಮುತ್ತಪ್ಪ ತಂದೆ ಯಲ್ಲಪ್ಪ ಮಾದರ
ವಯಾಃ 46 ವರ್ಷ, ಉಃ ಕೂಲಿ ಕೆಲಸ,

12) ಸಿದ್ಲಪ್ಪ ತಂದೆ ಯಮನಪ್ಪ ಮಾದರ
ವಯಾಃ 42 ವರ್ಷ, ಉಃ ಕೂಲಿ ಕೆಲಸ,

13) ಮಂಜಪ್ಪ @ ಮಂಜುನಾಥ ತಂದೆ ಹೆಬ್ಬಳೆಪ್ಪ ಮಾದರ
ವಯಾಃ 36 ವರ್ಷ, ಉಃ ಕೂಲಿ ಕೆಲಸ,

14) ನಾಗಪ್ಪ @ ಮರಿಯಪ್ಪ ತಾಯಿ ಸಿದ್ದವ್ವ @ ಸಿದ್ಲವ್ವ ಮಾದರ
ವಯಾಃ 23 ವರ್ಷ, ಉಃ ಕೂಲಿ ಕೆಲಸ,

15) ಚಿದಾನಂದ ತಂದೆ ಭೀಮಪ್ಪ ನರಗುಂದ
ವಯಾಃ 28 ವರ್ಷ, ಉಃ ಕೂಲಿ ಕೆಲಸ,

16) ರೇವಣೇಶ @ ರೇವಣಪ್ಪ ತಂದೆ ನಿಂಗಪ್ಪ ಮಾದರ
ವಯಾಃ 23 ವರ್ಷ, ಉಃ ಕೂಲಿ ಕೆಲಸ,

17) ಲಕ್ಷ್ಮಣ ತಂದೆ ಸಿದ್ದಪ್ಪ ಮಾದರ
ವಯಾಃ 27 ವರ್ಷ, ಉಃ ಕೂಲಿ ಕೆಲಸ,

18) ಮುತ್ತಣ್ಣ @ ಮುತ್ತಪ್ಪ ತಾಯಿ ತಿಪ್ಪವ್ವ ಸೋಮನಕಟ್ಟಿ
ವಯಾಃ 37 ವರ್ಷ, ಉಃ ಕೂಲಿ ಕೆಲಸ,

19) ಮಂಜುನಾಥ ತಂದೆ ಬಸಪ್ಪ ಪೂಜಾರ
ವಯಾಃ 42 ವರ್ಷ, ಉಃ ಕೂಲಿ ಕೆಲಸ,

ಎಲ್ಲರ ಸಾಃ ಸುರಕೋಡ ದುರ್ಗಮ್ಮನ ಗುಡಿ ಹತ್ತಿರ,
ತಾಃ ನರಗುಂದ, ಜಿಃ ಗದಗ.

**(ಆರೋಪಿತರ ಪರವಾಗಿ ಶ್ರೀ ಎಮ್.ಬಿ.ಕುಲಕರ್ಣಿ., ವಕೀಲರು)**

| | | |
|---|---|---|
| ಫಿರ್ಯಾದಿದಾರರ ಹೆಸರು | : | ಶ್ರೀಮತಿ ನೀಲವ್ವ ಕೋಂ ಕಲ್ಲನಗೌಡ ತಿಪ್ಪನಗೌಡ್ರ |
| ಗುನ್ಹೆ ವರದಿ ಮಾಡಿದ ದಿನಾಂಕ | : | 09.05.2022 |
| ಆರೋಪಿತರಿಗೆ ದಸ್ತಗಿರಿ ಮಾಡಿದ ದಿನಾಂಕ | : | -- |
| ನ್ಯಾಯಾಂಗ ಬಂಧನದಲ್ಲಿ ಇದ್ದ ದಿನಗಳು | : | – |
| ಆರೋಪಿತರಿಗೆ ಜಾಮೀನಿನ ಮೇಲೆ ಬಿಟ್ಟ ದಿನಾಂಕ | : | 20.12.2022 |
| ಸಾಕ್ಷಿ ಮಾಡಿದ ದಿನಾಂಕ | : | 28.12.2023 |
| ಸಾಕ್ಷಿ ಮುಕ್ತಾಯಗೊಂಡ ದಿನಾಂಕ | : | 08.01.2024 |
| ಆಪಾದಿತರ ವಿರುದ್ಧ ಮಾಡಿದ ಆಪಾದನೆಗಳು | : | ಭಾರತೀಯ ದಂಡ ಸಂಹಿತೆ ಕಲಂ 143, 147, 148, 323, 324,354 504, 506 ರೆ/ವಿ 149 ರಡಿಯಲ್ಲಿ. |
| ನ್ಯಾಯಾಧೀಶರ ಅಭಿಪ್ರಾಯ | : | ಬಿಡುಗಡೆಗೊಳಿಸಲಾಗಿದೆ. |

## ತೀರ್ಪು

ನರಗುಂದ ತಾಲೂಕಾ ಪೊಲೀಸ ಠಾಣೆ ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.143, 147, 148, 323, 324, 354, 504, 506 ಸಹ ಕಲಂ 149 ಅಡಿಯಲ್ಲಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ

2. ಅಭಿಯೋಜನಾ ಪಕ್ಷದವರು ದೋಷಾರೋಪಣಾ ಪಟ್ಟಿಯಲ್ಲಿ ಮಂಡಿಸಿದ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ-

ದಿನಾಂಕ 06.05.2022 ರಂದು ಸಾಯಂಕಾಲ 4-30 ಗಂಟೆಯ ಸುಮಾರಿಗೆ ನರಗುಂದ ಪೊಲೀಸ ಠಾಣೆಯ ವ್ಯಾಪ್ತಿಯ ಬರುವ ಸುರಕೋಡ ಗ್ರಾಮದಲ್ಲಿ ದ್ಯಾಮವ್ವ ಮತ್ತು ದುರ್ಗಮ್ಮ ದೇವರ ಮೂರ್ತಿ ಪ್ರತಿಷ್ಠಾಪನೆ ಮಾಡುವ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ದೇವಿಯ ಮಗಳಾರತಿ ಕಾರ್ಯಕ್ರಮ ಮಾಡುವಾಗ ಆರೋಪಿತರು ಅಪರಾಧ ಮಾಡುವ ಉದ್ದೇಶದಿಂದ ಅಕ್ರಮ ಕೂಟ ರಚಿಸಿಕೊಂಡು ಅಲ್ಲಿಗೆ ಕೈಯಲ್ಲಿ ಕೊಡಲಿ ಕಾವು ಮತ್ತು ಕಟ್ಟಿಗೆಯ ಬಡಿಗೆಯನ್ನು ಹಿಡಿದುಕೊಂಡು ಬಂದು ದೊಂಬಿ ಚಾಸಾ 7 ರಿಂದ 29 ರವರಿಗೆ " ಬರಲೇ ಸೂಳೆ ಮಕ್ಕಳ" ಅಂತಾ ಅವಾಚ್ಯ ಶಬ್ದಗಳಿಂದ ಬೈದು ಶಾಂತಭಂಗವನ್ನುಂಟು ಮಾಡಿ, ಚಾಸಾ 7 ರಿಂದ 33 ರವರಿಗೆ ಕೈಯಿಂದ ಸಿಕ್ಕ ಸಿಕ್ಕಲ್ಲಿ ಹೊಡಿಬಡಿ ಮಾಡಿದ್ದು ಮತ್ತು ಚಾಸಾ 1 ಮತ್ತು 4 ರಿಂದ 6 ರವರ ಕೈ ಹಿಡಿದು ಮತ್ತು ಸೀರೆ ಹಿಡಿದು ಎಳೆದಾಡಿ ಅವರ ಮಾನಕ್ಕೆ ಚ್ಯುತಿ ಉಂಟಾಗುವ ರೀತಿಯಲ್ಲಿ ನಡೆದುಕೊಂಡು ಅವರಿಗೆ "ನಿಮ್ಮನ್ನು ಜೀವಂತ ಬಿಡುವುದಿಲ್ಲಾ" ಅಂತಾ ಜೀವ ಬೇದರಿಕೆ ಹಾಕಿದ್ದು ಇರುತ್ತದೆ.

3. ದಿನಾಂಕ 09.05.2022 ರಂದು ಮದ್ಯಾಹ್ನ 3-30 ಗಂಟೆಗೆ ಫಿರ್ಯಾದಿದಾರರ ಲಿಖಿತ ದೂರನ್ನು ಚಾಸಾ 34 ರವರಿಗೆ ನೀಡಿರುತ್ತಾರೆ. ಸದರಿ ಪಿರ್ಯಾದಿದಾರರ ದೂರನ್ನು ಪರಿಶೀಲಿಸಿ,

ದೂರಿನ ಅಧಾರದ ಮೇಲೆ ಚಾಸಾ 34 ಇವರು ನರಗುಂದ ತಾಲೂಕಾ ಪೊಲೀಸ ಠಾಣಾ ಅಪರಾಧ ಸಂಖ್ಯೆ: 58/2022 ಕಲಂ.143, 147, 148, 323, 354, 504, 506 ಸಹ ಕಲಂ 149 ಐ.ಪಿ.ಸಿ. ಅಡಿಯಲ್ಲಿ ದಾಖಲಿಸಿ ನಂತರ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡಿರುತ್ತಾರೆ. ನಂತರ ಚಾಸಾ 34 ರವರು ದಿನಾಂಕ 21.02.2021 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪಂಚರಾದ ಸಿದ್ದಲಿಂಗಯ್ಯ ತಂದೆ ಗಂಗಾಧರಯ್ಯ ಚಿಕ್ಕಮಠ ಮತ್ತು ಉಮೇಶ ತಂದೆ ನಿಂಗಪ್ಪ ಚವಡಿ ಇವರ ಸಮಕ್ಷಮದಲ್ಲಿ ಘಟನಾ ಸ್ಥಳದ ಪಂಚನಾಮೆಯನ್ನು ತಯಾರಿಸಿರುತ್ತಾರೆ. ನಂತರ ಅದೇ ದಿನ ಸಾಕ್ಷಿದಾರರಾದ ಹೇಳಿಕೆಗಳನ್ನು ದಾಖಲಿಸಿಕೊಂಡಿರಿರುತ್ತಾರೆ. ನಂತರ ಮುಂದಿನ ತನಿಖೆಗೆ ಚಾಸಾ 34 ರವರು ಚಾಸಾ 35 ರವರಿಗೆ ಸಲ್ಲಿಸಿದ್ದು. ನಂತರ ಚಾಸಾ 35 ರವರು ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಇರುತ್ತವೆಂದು ಭಾರತೀಯ ದಂಡ ಸಂಹಿತೆ ಕಲಂ.143, 147, 148, 323, 354, 504, 506 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿದ್ದಾರೆಂದು ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

4. ತನಿಖಾಧಿಕಾರಿಗಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ ಮೇರೆಗೆ, ಈ ನ್ಯಾಯಾಲಯವು ಭಾರತೀಯ ದಂಡ ಸಂಹಿತೆ ಕಲಂ. 143, 147, 148, 323, 354, 504, 506 ಸಹ ಕಲಂ 149 ಅಡಿಯಲ್ಲಿ ಮಾಡಲಾದ ಅಪರಾಧದ ಬಗ್ಗೆ ಆರೋಪಿತರ ವಿರುದ್ಧ ಅಪರಾಧಿಕ ಸಂಜ್ಞೆಯನ್ನು ತೆಗೆದುಕೊಂಡು, ಆರೋಪಿತನಿಗೆ ಸಮನ್ಸ್ ನೋಟಿಸ್ ಕಳುಹಿಸಲಾಯಿತು. ಅದಕ್ಕೆ ಅನುಗುಣವಾಗಿ

ಆರೋಪಿತರು ನ್ಯಾಯಾಲಯಕ್ಕೆ ತಮ್ಮ ವಕೀಲರ ಮೂಲಕ ಹಾಜರಾಗಿದ್ದು, ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿರುತ್ತದೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ207 ರ ಅಡಿಯಲ್ಲಿ ಆರೋಪಿಗೆ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ಪೂರೈಸಲಾಗಿರುತ್ತದೆ.

5. ಸರ್ಕಾರದ ಪರವಾಗಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿತರ ಪರ ವಕೀಲರರಾದ ಶ್ರೀ ಎಮ್.ಬಿ.ಕುಲಕರ್ಣಿ., ರವರ ವಾದವನ್ನು ಆಲಿಸಿದ ನಂತರ ಆರೋಪಿತರ ವಿರುದ್ದ ಕಲಂ 251 ಸಿಆರ್‌ಪಿಸಿ ಪ್ರಕಾರ ಕಲಂ.143, 147, 148, 323, 354, 504, 506 ಸಹ ಕಲಂ 149 ರ ಪ್ರಕಾರ ದೋಷಾರೋಪಣೆಯನ್ನು ಸಿದ್ದಪಡಿಸಿ ಓದಿ ಹೇಳಲಾಗಿ ಆರೋಪಿತರು ತನ್ನ ವಿರುದ್ದ ಹೊರಿಸಲಾದ ಅಪರಾಧಗಳನ್ನು ಸುಳ್ಳೆಂದು ನಿರಾಕರಸಿ, ಸಾಕ್ಷಿ ವಿಚಾರಣೆ ಆಗಬೇಕೆಂದು ಕೋರಿಕೊಂಡಿರುತ್ತಾನೆ.

6. ಆರೋಪಿತರು ತಮ್ಮ ವಿರುದ್ದ ಮಾಡಲಾದ ದೋಷಾರೋಪಣೆಯನ್ನು ಒಪ್ಪಿಕೊಳ್ಳದ ಕಾರಣ ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ದ ಮಾಡಲಾದ ದೋಷಾರೋಣೆಯನ್ನು ಸಿದ್ದಪಡಿಸಲು ಈ ಪ್ರಕರಣದಲ್ಲಿ ಫಿರ್ಯಾದಿದಾರರಾದ ಚಾಸಾ 1 ರವರನ್ನು ಫ್ರಾಸಾ.1 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಅಲ್ಲದೆ, ದಾಖಲೆಗಳನ್ನು ನಿಪಿ.1 ರಿಂದ 31 ರವರೆಗೆ ಗುರುತಿಸಿಕೊಂಡಿರುತ್ತಾರೆ. ನಂತರ ಉಳಿದ ಸಾಕ್ಷಿದಾರರಾದ ಚಾಸಾ ಫ್ರಾಸಾ 2 ರಿಂದ 30 ರವರನ್ನು ವಿಚಾರಣೆಗೊಳಪಡಿಸಿರುತ್ತಾರೆ.

7. ಎಲ್ಲಾ ಸಾಕ್ಷಿದಾರರ ಸಾಕ್ಷ್ಯವನ್ನು ಪರಿಗಣಿಸಿದಾಗ ಈ ಪ್ರಕರಣಲ್ಲಿ ಫ್ರಾಸಾ 1 ರಿಂದ 28 ರವರು ಅಭಿಯೋಜನಾ ಪಕ್ಷದ ಪರವಾಗಿ ಸಾಕ್ಷಿ ನುಡಿಯದೇ ಪ್ರತಿಕೂಲ ಸಾಕ್ಷಿಯನ್ನು ನುಡಿದಿದ್ದು ಅವರನ್ನು ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಲ್ಪಟ್ಟಿರುವುದರಿಂದ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಬೇಕೆಂಬ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಳ್ಳಿಹಾಕಲಾಯಿತು. ಆರೋಪಿತರು ವಿರುದ್ದ ಅಭಿಯೋಜನಾ ಪಕ್ಷದವರು ಮಂಡಿಸಿದ ಮೌಖಿಕ ಸಾಕ್ಷ್ಯದಲ್ಲಿ ಯಾವುದೇ ವಿರುದ್ಧವಾದ ಸಾಕ್ಷ್ಯವಿಲ್ಲದ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ 313(1)(ಬಿ) ರ ಅಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಆರೋಪಿತರು ತಮ್ಮ ಪರವಾಗಿ ಯಾವುದೇ ಸಾಕ್ಷಿಗಳು ಇರುವುದಿಲ್ಲವೆಂದು ಹೇಳಿರುವುದರಿಂದ, ಆರೋಪಿತರು ಮತ್ತು ಅಭಿಯೋಜಕ ಪಕ್ಷದ ನ್ಯಾಯಾವಾದಿಗಳ ವಾದ ವಿವಾದಗಳನ್ನು ಆಲಿಸಿ, ಈ ಪ್ರಕರಣವನ್ನು ಅಂತಿಮ ತೀರ್ಮಾನಕ್ಕೆ ಕೈಗೆತ್ತಿಕೊಳ್ಳಲಾಯಿತು.

8. ದೋಷಾರೋಪಣಾ ಪಟ್ಟಿಯಲ್ಲಿ ಅಭಿಯೋಜನಾ ಪಕ್ಷದವರು ಮಂಡಿಸಿದ ವಾದ ಪ್ರಕಾರ ಈ ಕೆಳಕಂಡ ಅಂಶಗಳನ್ನು ಅಭಿಯೋಜನಾ ಪಕ್ಷದವರು ಸಂಶಯಾತೀತವಾಗಿ ಸಿದ್ಧಪಡಿಸಬೇಕಾಗಿದೆ.

1. ಅಭಿಯೋಜಕರು, ಈ ಪ್ರಕರಣದ ಆರೋಪಿತರು ದಿನಾಂಕ 06.05.2022 ರಂದು ಸಾಯಂಕಾಲ 4.30 ಗಂಟೆಗೆ ಸುಮಾರಿಗೆ ನರಗುಂದ ಪೊಲೀಸ ಠಾಣೆಯ ವ್ಯಾಪ್ತಿಯ ಬರುವ ಸುರಕೋಡ ಗ್ರಾಮದಲ್ಲಿ ದ್ಯಾಮವ್ವ ಮತ್ತು ದುರ್ಗಮ್ಮ ದೇವರ ಮೂರ್ತಿ ಪ್ರತಿಷ್ಠಾಪನೆ ಮಾಡುವ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ದೇವಿಯ ಮಂಗಳಾರತಿ ಕಾರ್ಯಕ್ರಮ ಮಾಡುವಾಗ ಅಪರಾಧ ಮಾಡುವ ಉದ್ದೇಶದಿಂದ ಅಕ್ರಮ ಕೂಟ ರಚಿಸಿಕೊಂಡು ಅಲ್ಲಿಗೆ ಬಂದು ಆ ಮೂಲಕ ಭಾರತ

ದಂಡ ಸಂಹಿತೆ ಕಲಂ.143 ಸಹ ಕಲಂ 149 ರ ಅಡಿಯಲ್ಲಿ ಅಪರಾಧ ಎಸಗಿರುತ್ತಾರೆ ಅಂತಾ ಸಂಶಯಾತೀತವಾಗಿ ಸಿದ್ದಪಡಿಸಿದ್ದಾರೆಯೇ?

2. ಅಭಿಯೋಜಕರು, ಈ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ ಆರೋಪಿತರು ಅಪರಾಧ ಮಾಡುವ ಉದ್ದೇಶದಿಂದ ಅಕ್ರಮ ಕೂಟ ರಚಿಸಿಕೊಂಡು ಬಂದು ದೊಂಬಿ ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ.147 ಸಹ ಕಲಂ 149 ಅಡಿಯಲ್ಲಿ ಅಪರಾಧ ಎಸಗಿರುತ್ತಾರೆ ಅಂತಾ ಸಂಶಯಾತೀತವಾಗಿ ಸಿದ್ದಪಡಿಸಿದ್ದಾರೆಯೇ?

3. ಅಭಿಯೋಜಕರು, ಈ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ ಆರೋಪಿತರು ಅಪರಾಧ ಮಾಡುವ ಉದ್ದೇಶದಿಂದ ಅಕ್ರಮ ಕೂಟ ರಚಿಸಿಕೊಂಡು ಕೈಯಲ್ಲಿ ಕೊಡಲಿ ಕಾವು ಮತ್ತು ಕಟ್ಟಿಗೆಯ ಬಡಿಗೆಯನ್ನು ಹಿಡಿದುಕೊಂಡು ಬಂದು ದೊಂಬಿ ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ.148 ಸಹ ಕಲಂ 149 ಅಡಿಯಲ್ಲಿ ಅಪರಾಧ ಎಸಗಿರುತ್ತಾರೆ ಅಂತಾ ಸಂಶಯಾತೀತವಾಗಿ ಸಿದ್ದಪಡಿಸಿದ್ದಾರೆಯೇ?

4. ಅಭಿಯೋಜಕರು, ಈ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ ಆರೋಪಿತರು ಅಪರಾಧ ಮಾಡುವ ಉದ್ದೇಶದಿಂದ ಅಕ್ರಮ ಕೂಟ ರಚಿಸಿಕೊಂಡು ಬಂದು ಚಾಸಾ 07 ರಿಂದ 34 ರವರಿಗೆ ಕೈಯಿಂದ ಸಿಕ್ಕ ಸಿಕ್ಕಲ್ಲಿ ಹೊಡಿ ಬಡಿ ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ.323 ಸಹ ಕಲಂ 149 ಅಡಿಯಲ್ಲಿ ಅಪರಾಧ ಎಸಗಿರುತ್ತಾರೆ ಅಂತಾ ಸಂಶಯಾತೀತವಾಗಿ ಸಿದ್ದಪಡಿಸಿದ್ದಾರೆಯೇ?

5. ಅಭಿಯೋಜಕರು, ಈ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ ಆರೋಪಿತರು ಅಪರಾಧ ಮಾಡುವ ಉದ್ದೇಶದಿಂದ ಅಕ್ರಮ ಕೂಟ ರಚಿಸಿಕೊಂಡು ಬಂದು ಚಾಸಾ 1 ಮತ್ತು 4 ರಿಂದ 06 ರವರ ಕೈ ಹಿಡಿದು ಎಳೆದಾಡಿ ಮತ್ತು ಸೀರೆ ಹಿಡಿದು ಎಳೆದಾಡಿ ಅವರ ಮಾನಕ್ಕೆ ಚ್ಯುತಿ ಉಂಟಾಗುವ ರೀತಿಯಲ್ಲಿ ನಡೆದುಕೊಂಡು ಆ ಮೂಲಕ ಭಾರತ ದಂಡ ಸಂಹಿತೆ ಕಲಂ.354 ಸಹ ಕಲಂ 149 ಅಡಿಯಲ್ಲಿ ಅಪರಾಧ ಎಸಗಿರುತ್ತಾರೆ ಅಂತಾ ಸಂಶಯಾತೀತವಾಗಿ ಸಿದ್ದಪಡಿಸಿದ್ದಾರೆಯೇ?

6. ಅಭಿಯೋಜಕರು, ಈ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ ಆರೋಪಿತರು ಅಪರಾಧ ಮಾಡುವ ಉದ್ದೇಶದಿಂದ ಅಕ್ರಮ ಕೂಟ

ರಚಿಸಿಕೊಂಡು ಬಂದು ಚಾಸಾ 7 ರಿಂದ 29 ರವರಿಗೆ "ಬರಲೇ ಸೂಳೆ ಮಕ್ಕಳ್" ಅಂತಾ ಅವಾಚ್ಯ ಶಬ್ದಗಳಿಂದ ಬೈದು ಶಾಂತಭಂಗವನ್ನುಂಟು ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ.504 ಸಹ ಕಲಂ 149 ಅಡಿಯಲ್ಲಿ ಅಪರಾಧ ಎಸಗಿರುತ್ತಾರೆ ಅಂತಾ ಸಂಶಯಾತೀತವಾಗಿ ಸಿದ್ದಪಡಿಸಿದ್ದಾರೆಯೇ?

7. ಅಭಿಯೋಜಕರು, ಈ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ ಆರೋಪಿತರು ಅಪರಾಧ ಮಾಡುವ ಉದ್ದೇಶದಿಂದ ಅಕ್ರಮ ಕೂಟ ರಚಿಸಿಕೊಂಡು ಬಂದು ಚಾಸಾ 1 ಮತ್ತು 4 ರಿಂದ 06 ರವರಿಗೆ "ನಿಮ್ಮನ್ನು ಜೀವಂತ ಬಿಡುವುದಿಲ್ಲಾ" ಅಂತಾ ಜೀವ ಬೇದರಿಕೆ ಹಾಕಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ.506 ಸಹ ಕಲಂ 149 ಅಡಿಯಲ್ಲಿ ಆರೋಪಿತರು ಅಪರಾಧ ಎಸಗಿರುತ್ತಾರೆ ಅಂತಾ ಸಂಶಯಾತೀತವಾಗಿ ಸಿದ್ದಪಡಿಸಿದ್ದಾರೆಯೇ?

8. ಏನು ಆದೇಶ?

9. ಅಭಿಯೋಜನಾ ಪಕ್ಷದ ಪರವಾಗಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಆರೋಪಿ ಪರ ವಕೀಲರಾದ ಶ್ರೀ ಎಮ್.ಬಿ.ಕುಲಕರ್ಣಿ., ರವರ ವಾದವನ್ನು ಆಲಿಸಿ, ಲಭ್ಯವಿರುವ ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯವನ್ನು ಪರಿಶೀಲಿಸಿ ಈ ಮೇಲೆ ಹೇಳಿದ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಲಾಗಿದೆ.

**ಅಂಶ ನಂ.1 : ನಕಾರಾತ್ಮಕವಾಗಿ**
**ಅಂಶ ನಂ.2 : ನಕಾರಾತ್ಮಕವಾಗಿ**
**ಅಂಶ ನಂ.3 : ನಕಾರಾತ್ಮಕವಾಗಿ**
**ಅಂಶ ನಂ.4 : ನಕಾರಾತ್ಮಕವಾಗಿ**
**ಅಂಶ ನಂ.5 : ನಕಾರಾತ್ಮಕವಾಗಿ**
**ಅಂಶ ನಂ.6 : ನಕಾರಾತ್ಮಕವಾಗಿ**
**ಅಂಶ ನಂ.7 : ನಕಾರಾತ್ಮಕವಾಗಿ**
**ಅಂಶ ನಂ.8 : ಅಂತಿಮ ಆದೇಶ ಈ ಕೆಳಕಂಡ ಕಾರಣಗಳಂತೆ ಇರುತ್ತದೆ.**

## **ಕಾರಣಗಳು**

10. **ಅಂಶಗಳುಃ 1 ರಿಂದ 7:** ಈ ಎಲ್ಲಾ ಅಂಶಗಳು ಒಂದು ಘಟನೆಗೆ ಸಂಬಂಧಪಟ್ಟಿದ್ದು ಒಂದಕ್ಕೊಂದು ಪೂರಕವಾಗಿರುವುದರಿಂದ ಈ ಎಲ್ಲಾ ಅಂಶಗಳನ್ನು ಒಟ್ಟಿಗೆ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

11. ಅಭಿಯೋಜಕ ಪಕ್ಷದವರು ಈ ಪ್ರಕರಣದಲ್ಲಿ ಚಾಸಾ 1 ಪಿರ್ಯಾದಿದಾರರನ್ನು ಫ್ರಾಸಾ.1 ಎಂದು, ಚಾಸಾ 3 ಘಟನಾ ಜಾಗೆಯ ಪಂಚ ಸಾಕ್ಷಿದಾರರು / ಪ್ರತ್ಯಕ್ಷ ಸಾಕ್ಷಿದಾರರನ್ನು ಫ್ರಾಸಾ 2 ಎಂದು, ಚಾಸಾ 4 ರಿಂದ 11 ಮತ್ತು 13 ರಿಂದ 15, 17 ರಿಂದ 33 ಗಾಯಾಳು / ಪ್ರತ್ಯಕ್ಷ ಸಾಕ್ಷಿದಾರರನ್ನು ಫ್ರಾಸಾ 3 ರಿಂದ 30 ಎಂದು ವಿಚಾರಣೆಗೊಳಪಡಿಸಿರುತ್ತಾರೆ ಹಾಗೂ ದಾಖಲೆಗಳನ್ನು ನಿಪಿ 1 ದೂರು, ನಿಪಿ 2 ಘಟನಾ ಜಾಗೆ ಪಂಚನಾಮೆ, ನಿಪಿ 2(ಎ) ಚಾಸಾ 3 ರವರ ಸಹಿ, ನಿಪಿ 3 ಭಾವಚಿತ್ರ, ನಿಪಿ 4 ಚಾಸಾ 4 ರವರ ಹೇಳಿಕೆ, ನಿಪಿ 5 ಚಾಸಾ 5 ರವರ ಹೇಳಿಕೆ, ನಿಪಿ 6 ಚಾಸಾ 6 ರವರ ಹೇಳಿಕೆ, ನಿಪಿ 7 ಚಾಸಾ 7 ರವರ ಹೇಳಿಕೆ, ನಿಪಿ 8 ಚಾಸಾ 8 ರವರ ಹೇಳಿಕೆ, ನಿಪಿ 9 ಚಾಸಾ 9 ರವರ ಹೇಳಿಕೆ, ನಿಪಿ 10 ಚಾಸಾ 10 ರವರ ಹೇಳಿಕೆ, ನಿಪಿ 11 ಚಾಸಾ 11 ರವರ ಹೇಳಿಕೆ, ನಿಪಿ 12 ಚಾಸಾ 13 ರವರ ಹೇಳಿಕೆ, ನಿಪಿ 13 ಚಾಸಾ 14 ರವರ ಹೇಳಿಕೆ, ನಿಪಿ 14 ಚಾಸಾ 15 ರವರ ಹೇಳಿಕೆ, ನಿಪಿ 15 ಚಾಸಾ 18 ರವರ ಹೇಳಿಕೆ, ನಿಪಿ 16 ಚಾಸಾ 20 ರವರ ಹೇಳಿಕೆ, ನಿಪಿ 17 ಚಾಸಾ 21 ರವರ ಹೇಳಿಕೆ, ನಿಪಿ 18 ಚಾಸಾ 22 ರವರ ಹೇಳಿಕೆ, ನಿಪಿ 19 ಚಾಸಾ 23 ರವರ ಹೇಳಿಕೆ, ನಿಪಿ 20 ಚಾಸಾ 24 ರವರ ಹೇಳಿಕೆ, ನಿಪಿ 21 ಚಾಸಾ 25 ರವರ ಹೇಳಿಕೆ, ನಿಪಿ 22 ಚಾಸಾ

26 ರವರ ಹೇಳಿಕೆ, ನಿಪಿ 23 ಚಾಸಾ 27 ರವರ ಹೇಳಿಕೆ, ನಿಪಿ 24 ಚಾಸಾ 28 ರವರ ಹೇಳಿಕೆ, ನಿಪಿ 25 ಚಾಸಾ 29 ರವರ ಹೇಳಿಕೆ, ನಿಪಿ 26 ಚಾಸಾ 30 ರವರ ಹೇಳಿಕೆ, ನಿಪಿ 27 ಚಾಸಾ 31 ರವರ ಹೇಳಿಕೆ, ನಿಪಿ 28 ಚಾಸಾ 32 ರವರ ಹೇಳಿಕೆ, ನಿಪಿ 29 ಚಾಸಾ 33 ರವರ ಹೇಳಿಕೆ, ನಿಪಿ 30 ಚಾಸಾ 17 ರವರ ಹೇಳಿಕೆ, ನಿಪಿ 31 ಚಾಸಾ 19 ರವರ ಹೇಳಿಕೆ ಎಂದು ಗುರುತಿಸಿಕೊಂಡಿರುತ್ತಾರೆ.

ಈ ಪ್ರಕರಣದ ಅಭಿಯಾೋಜನಾ ಪಕ್ಷದವರು ಆರೋಪಿತರು, ಪಿರ್ಯಾದಿದಾರಿಗೆ ಅವಾಚ್ಯವಾಗಿ ಶಬ್ದಗಳಿಂದ ಬೈದು, ಕೈಯಿಂದ ಹೊಡಿಬಡಿ ಮಾಡಿದಲ್ಲದೇ, ಚಾಸಾ 1 ಮತ್ತು 4 ರಿಂದ 6 ರವರ ಕೈ ಮತ್ತು ಸೀರೆ ಹಿಡಿದು ಎಳೆದಾಡಿ ಅವರ ಮಾನಕ್ಕೆ ಚ್ಯುತಿ ಉಂಟಾಗುವ ರೀತಿಯಲ್ಲಿ ನಡೆದುಕೊಂಡಿದಲ್ಲದೇ, ಜೀವ ಬೇದರಿಕೆ ಹಾಕಿದ್ದು ಎಂದು ದಾಖಲಿಸಿದ್ದು ಇರುತ್ತದೆ. ಈ ಪ್ರಕರಣದಲ್ಲಿ ಆರೋಪಿತರ ಮೇಲೆ ಮಾಡಲಾದಂತಹ ಆರೋಪಗಳನ್ನು ಸಿದ್ದಪಡಿಸಲು ಅಭಿಯೋಜನಾ ಪಕ್ಷದವರು ಫಿರ್ಯಾದಿದಾರರನ್ನು ಮತ್ತು ಸಾಕ್ಷಿದಾರರನ್ನು ಪ್ರಾಸಾ 1 ರಿಂದ 30 ರಂತೆ ವಿಚಾರಣೆ ಗೊಳಪಡಿಸಿರುತ್ತಾರೆ. ಪ್ರಾಸಾ 1 ರವರು ಅಭಿಯೋಜನಾ ಪಕ್ಷದ ಪರವಾಗಿ ಸಾಕ್ಷ್ಯ ನುಡಿಯದೇ ಈ ಕೆಳಗಿನಂತೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

12. ಅವರಿಗೆ ಎಲ್ಲಾ ಸಾಕ್ಷಿದಾರರ ಮತ್ತು ಆರೋಪಿತರ ಪರಿಚಯ ಇರುತ್ತದೆ. ಸುಮಾರು ಒಂದು ವರ್ಷದ ಹಿಂದೆ ಅವರು ಹಾಗೂ ಆರೋಪಿತರ ಮಧ್ಯೆ ದ್ಯಾಮವ್ವ ದೇವರ ಮೂರ್ತಿ ಪ್ರತಿಷ್ಠಾಪನೆ ವಿಷಯಕ್ಕೆ ಸಂಬಂದಿಸಿದಂತೆ ಜಗಳವಾಗಿದ್ದು ಸದರಿ ವಿಷಯವನ್ನು ಅವರು ಪೊಲೀಸರಿಗೆ ಹೇಳಿದ್ದು,

ಆಗ ಪೊಲೀಸರು ಒಂದು ಹಾಳೆಯಲ್ಲಿ ಅವರ ಹೆಬ್ಬೆಟ್ಟನ್ನು ಪಡೆದುಕೊಂಡಿರುತ್ತಾರೆ ಆದರೆ ಸದರಿ ಹಾಳೆಯಲ್ಲಿ ಏನೂ ಬರೆದಿರುತ್ತಾರೆ ಎಂದು ಅವರಿಗೆ ಗೊತ್ತಿಲ್ಲ. ಅವರು ಪೊಲೀಸರಿಗೆ ಆರೋಪಿತರ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ. ಆರೋಪಿತರು ಯಾವುದೇ ಅಕ್ರಮ ಕೂಟ ರಚಿಸಿಕೊಂಡು ಬಂದು ಅವರಿಗೆ ಯಾವುದೇ ರೀತಿ ಅವಾಚ್ಯವಾಗಿ ಬೈದಾಡಿರುವುದಿಲ್ಲ. ಕೈಯಿಂದ ಹೊಡಿಬಡಿ ಮಾಡಿರುವುದಿಲ್ಲ ಹಾಗೂ ಅವರ ಮಾನಕ್ಕೆ ಚ್ಯುತಿ ಉಂಟಾಗುವ ರೀತಿಯಲ್ಲಿ ನಡೆದುಕೊಂಡಿರುವುದಿಲ್ಲ ಹಾಗೂ ಜೀವ ಬೇದರಿಕೆ ಹಾಕಿರುವುದಿಲ್ಲ. ಪೊಲೀಸರನು ಅವರನ್ನು ಯಾವುದೇ ವಿಚಾರಣೆ ಮಾಡಿರುವುದಿಲ್ಲ ಹಾಗೂ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಅವರ ಹಾಗೂ ಆರೋಪಿತರ ನಡುವೆ ಇರುವ ಜಗಳವನ್ನು ರಾಜಿ ಮಾಡಿಕೊಂಡಿದ್ದು. ಸಾಕ್ಷಿಯು ಒಂದು ಹೆಬ್ಬೆಟ್ಟಿನ ಗುರುತು ಇರುವ ದಾಖಲೆಯನ್ನು ತೋರಿಸಿದ್ದು ಸಾಕ್ಷಿಯು ಅವರ ಹೆಬ್ಬೆಟ್ಟಿನ ಗುರುತನ್ನು ಗುರುತಿಸಿರುತ್ತಾರೆ ಆದರೆ ದಾಖಲೆಯನ್ನು ಗುರುತಿಸಿರುವುದಿಲ್ಲ. ಸದರಿ ದಾಖಲೆಯು ದೂರಾಗಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಗಿರುತ್ತದೆ.

13. ಫ್ರಾಸಾ 1 ರವರನ್ನು ಮಾನ್ಯ ಸಸಅವರು ಪತಿಕೂಲ ಸಾಕ್ಷಿಯೆಂದು ಪರಿಗಣಿಸಿ ಸವಿಸ್ತಾರವಾಗಿ ಪಾಟೀ ಸವಾಲಿಗೊಳಪಡಿಸಿದರೂ ಸಹ ಅಭಿಯೋಜಕ ಪಕ್ಷಕ್ಕೆ ಅನುಕೂಲವಾಗುವಂತಹ ಯಾವುದೇ ಸಾಕ್ಷ್ಯವು ಕಂಡುಬಂದಿರುವುದಿಲ್ಲ.

14. ಅದೇ ರೀತಿ ಘಟನಾ ಜಾಗೆ ಪಂಚ ಸಾಕ್ಷಿದಾರರಾದ ಚಾಸಾ 3 ರವರನ್ನು ಫ್ರಾಸಾ 2 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಕೆಳಗಿನಂತೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

15. ಅವರಿಗೆ ಎಲ್ಲಾ ಸಾಕ್ಷಿದಾರರ ಮತ್ತು ಆರೋಪಿತರ ಪರಿಚಯ ಇರುತ್ತದೆ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರು ಅವರನ್ನು ಯಾವುದೇ ವಿಚಾರಣೆ ಮಾಡಿರುವುದಿಲ್ಲ ಹಾಗೂ ಪೊಲೀಸರು ಅವರ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಅವರು ತೋರಿಸಿದಂತೆ ಯಾವುದೇ ಗುನ್ನೆ ಸ್ಥಳ ಪಂಚನಾಮೆಯನ್ನು ಮಾಡಿರುವುದಿಲ್ಲ. ಪೊಲೀಸರು ಅವರನ್ನು ನಿಲ್ಲಿಸಿ ಒಂದು ಭಾವಚಿತ್ರ ವನ್ನು ತೆಗೆದುಕೊಂಡಿರುತ್ತಾರೆ ಮತ್ತು ಒಂದು ದಾಖಲೆಯಲ್ಲಿ ಅವರ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅವರ ಸಹಿಯನ್ನು ಮಾತ್ರ ಗುರುತಿಸಿರುತ್ತಾರೆ ದಾಖಲೆಯನ್ನು ಗುರುತಿಸಿರುವುದಿಲ್ಲ ಸದರಿ ದಾಖಲೆಯು ಗುನ್ನೆ ಸ್ಥಳ ಪಂಚನಾಮೆಯಾಗಿದ್ದು ಅದನ್ನು ನಿಪಿ 2 ಎಂದು ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಗಿರುತ್ತದೆ. ಸದರಿ ಸಮಯದಲ್ಲಿ ತೆಗೆದ

ಭಾವಚಿತ್ರವನ್ನು ಸಾಕ್ಷಿ ಯು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 3 ಎಂದು ಗುರುತಿಸಲಾಗಿರುತ್ತದೆ.

16. ಫ್ರಾಸಾ 2 ರವರನ್ನು ಮಾನ್ಯ ಸಸಅವರು ಪತಿಕೂಲ ಸಾಕ್ಷಿಯೆಂದು ಪರಿಗಣಿಸಿ ಸವಿಸ್ತಾರವಾಗಿ ಪಾಟೀ ಸವಾಲಿಗೊಳಪಡಿಸಿದರೂ ಸಹ ಅಭಿಯೋಜಕ ಪಕ್ಷಕ್ಕೆ ಅನುಕೂಲವಾಗುವಂತಹ ಯಾವುದೇ ಸಾಕ್ಷ್ಯವು ಕಂಡುಬಂದಿರುವುದಿಲ್ಲ.

17. ಅದೇ ರೀತಿ ಗಾಯಾಳು / ಪ್ರತ್ಯಕ್ಷ್ಯಸಾಕ್ಷಿದಾರರಾದ ಚಾಸಾ 4 ರಿಂದ 11 ಮತ್ತು 13 ರಿಂದ 15, 17 ರಿಂದ 33 ಗಾಯಾಳು / ಪ್ರತ್ಯಕ್ಷ್ಯ ಸಾಕ್ಷಿದಾರರನ್ನು ಫ್ರಾಸಾ 3 ರಿಂದ 30 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಕೆಳಗಿನಂತೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

18. ಅವರಿಗೆ ಎಲ್ಲಾ ಸಾಕ್ಷಿದಾರರ ಮತ್ತು ಆರೋಪಿತರ ಪರಿಚಯ ಇರುತ್ತದೆ. ಸುಮಾರು ಒಂದು ವರ್ಷದ ಹಿಂದೆ ಅವರ ಹಾಗೂ ಆರೋಪಿತರ ಮಧ್ಯೆ ದ್ಯಾಮವ್ವ ದುರ್ಗವ್ವ ದೇವರ ಮೂರ್ತಿ ಪ್ರತಿಷ್ಠಾಪನೆ ವಿಷಯಕ್ಕೆ ಸಂಬಂದಿಸಿದಂತೆ ಜಗಳವಾಗಿದ್ದು, ಆರೋಪಿತರು ಯಾವುದೇ ಅಕ್ರಮ ಕೂಟ ರಚಿಸಿಕೊಂಡು ಬಂದು ಅವರಿಗೆ ಯಾವುದೇ ರೀತಿ ಅವಾಚ್ಯ

ಬೈದಾಡಿರುವುದಿಲ್ಲ ಹಾಗೂ ಕೈಯಿಂದ ಹೊಡಿಬಡಿ ಮಾಡಿರುವುದಿಲ್ಲ ಹಾಗೂ ಚಾಸಾ 1 ಮತ್ತು 4 ರಿಂದ 6 ರವರ ಮಾನಕ್ಕೆ ಚ್ಯುತಿ ಉಂಟಾಗುವ ರೀತಿಯಲ್ಲಿ ನಡೆದುಕೊಂಡಿರುದಿಲ್ಲ ಹಾಗೂ ಜೀವ ಬೇದರಿಕೆ ಹಾಕಿರುವುದಿಲ್ಲ. ಪೊಲೀಸರು ಅವರನ್ನು ಯಾವುದೇ ವಿಚಾರಣೆ ಮಾಡಿರುವುದಿಲ್ಲ ಹಾಗೂ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ, ಅವರ ಹಾಗೂ ಆರೋಪಿತರ ನಡುವೆ ಇರುವ ಜಗಳ ಈಗ ರಾಜಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

19. ಪ್ರಾಸಾ 3 ಮತ್ತು 30 ರವರನ್ನು ಮಾನ್ಯ ಸಸಅವರು ಪತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಸವಿಸ್ತಾರವಾಗಿ ಪಾಟೀ ಸವಾಲಿಗೊಪಡಿಸಿದರೂ ಸಹ ಅಭಿಯೋಜನಾ ಪಕ್ಷಕ್ಕೆ ಅನುಕೂಲವಾಗುವ ಯಾವುದೇ ಸಾಕ್ಷ್ಯವು ಕಂಡು ಬಂದಿರುವುದಿಲ್ಲ.

20. ಪ್ರಾಸಾ 1 ರಿಂದ 30 ರವರನ್ನು ಅಭಿಯಾೀಜಕದವರು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಮಾನ್ಯ ಸಸಅ ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ಅಭಿಯೋಜಕ ಪಕ್ಷಕ್ಕೆ ಅನುಕೂಲವಾಗುವಂತಹ ಯಾವುದೇ ಸಾಕ್ಷ್ಯವನ್ನು ಆರೋಪಿತರು ದೋಷಾರೋಪಣಾ ಪಟ್ಟಿಯಲ್ಲಿ ಹೇಳಿದಂತಹ ಅಪರಾಧ ಎಸಗಿದ್ದಾರೆ ಎಂದು ಸೂಚಿಸಿ ಕೇಳಿದ ಎಲ್ಲಾ ಪ್ರಶ್ನೆಗಳನ್ನು

ಅಲ್ಲಗಳೆದಿರುತ್ತಾರೆ ಮತ್ತು ಅಭಿಯೋಜಕ ಪಕ್ಷಕ್ಕೆ ಅನುಕೂಲವಾಗುವ ಸಾಕ್ಷ್ಯವನ್ನು ನುಡಿದಿರುವುದಿಲ್ಲ.

21. ಮುಂದುವರೆದು ಫ್ರಾಸಾ 1 ರಿಂದ 30 ರವರ ಸಾಕ್ಷ್ಯವನ್ನು ಪರಿಗಣಿಸಿದರೆ, ಆರೋಪಿತರು ಫಿರ್ಯಾದಿದಾರಿಗೆ ಯಾವುದೇ ಅಕ್ರಮ ಕೂಟ ರಚಿಸಿಕೊಂಡು ಬಂದು ದುಂಬಿ ಮಾಡಿರುವುದಾಗಲೀ, ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿದ್ದಾಗಲಿ, ಕೈಯಿಂದ ಹೊಡೆದಿದ್ದಾಗಲೀ, ಹಾಗೂ ಚಾಸಾ 1 ಮತ್ತು 4 ರಿಂದ 6 ರವರ ಕೈ ಮತ್ತು ಸೀರೆ ಹಿಡಿದು ಎಳೆದಾಡಿ ಅವರ ಮಾನಕ್ಕೆ ಚ್ಯುತಿ ಉಂಟಾಗುವ ರೀತಿಯಲ್ಲಿ ನಡೆದುಕೊಂಡಿದಲ್ಲದೇ, ಅವರಿಗೆ ಜೀವ ಬೇದರಿಕೆ ಹಾಕಿದ್ದಾಗಲೀ ಕಂಡು ಬಂದಿರುವುದಿಲ್ಲ. ಅದೇ ರೀತಿ ಫ್ರಾಸಾ.1 ರವರು ಆರೋಪಿತರು ತನಗೆ ಯಾವುದೇ ತೊಂದರೆಯನ್ನು ಕೊಟ್ಟಿರುವುದಿಲ್ಲ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಅದಲ್ಲದೆ, ಪಿರ್ಯಾದಿದಾರನು ಹಾಗೂ ಆರೋಪಿತರ ಮಧ್ಯದಲ್ಲಿ ಇರುವ ಮನಸ್ತಾಪವು ಈಗ ಬಗೆಹರಿಕೊಂಡಿದ್ದಾರೆ ಎಂದು ಪಿರ್ಯಾದಿದಾರರ ಹಾಗೂ ಗಾಯಾಳು ಸಾಕ್ಷಿದಾರರ ಸಾಕ್ಷ್ಯದಿಂದ ತಿಳಿದುಬರುತ್ತದೆ. ಮುಂದುವರೆದು ಮಾನ್ಯ ಸಸಅ ರವರು ಫ್ರಾಸಾ.1 ರಿಂದ 30 ರವರನ್ನು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ವಿಸ್ತಾರವಾದ ಪಾಟೀ ಸವಾಲಿಗೊಳಪಡಿಸಿದ್ದರೂ ಪಾಟೀ ಸವಾಲಿನಲಿಯೂ ಸಹ ಆರೋಪಿತರು ದೋಷಾರೋಪಣಾ ಪಟ್ಟಿಯಲ್ಲಿ ಹೇಳಿದಂತಹ ಅಪರಾಧ ಮಾಡಿರುತ್ತಾರೆ ಎಂಬ ಅಂಶಗಳು

ಕಂಡುಬಂದಿರುವುದಿಲ್ಲ. ಆದಕಾರಣ ನನ್ನ ಅಭಿಪ್ರಾಯದಲ್ಲಿ ಫ್ರಾಸಾ 1 ರಿಂದ 30 ರವರ ಸಾಕ್ಷ್ಯವು ಅಭಿಯೋಜನಾ ಪಕ್ಷಕ್ಕೆ ದೋಷರೋಪಣಾ ಪಟ್ಟಿಯಲ್ಲಿ ಹೇಳಿದಂತಹ ಅರೋಪಗಳನ್ನು ಸಿದ್ದಪಡಿಸಲು ಸಹಾಯಕಾರಿಯಾಗುವುದಿಲ್ಲ. ಸಾಮಾನ್ಯವಾಗಿ ಗಾಯಾಳುಗಳು ಮತ್ತು ನೊಂದ ವ್ಯಕ್ತಿಗಳು ತನಗೆ ಗಾಯವನ್ನುಂಟುಮಾಡಿದಂತಹ ಅಥವಾ ತನಗೆ ತೊಂದರೆಯನುಂಟು ಮಾಡಿದಂತಹ ವ್ಯಕ್ತಿಗಳ ಪರವಾಗಿ ಸಾಕ್ಷಿಯನ್ನು ನುಡಿಯುವುದಿಲ್ಲ ಮತ್ತು ಅವರ ಬಿಡುಗಡೆಗೆ ಅನುಕೂಲವಾಗುವಂತೆ ಸಾಕ್ಷ್ಯವನ್ನು ಹೇಳುವುದಿಲ್ಲ ಮತ್ತು ಚಾಸಾ 1 ಮತ್ತು ಆರೋಪಿತರು ಸಂಬಂಧಿಕರಿರುವುದರಿಂದ ರಾಜೀ ಮಾಡಿಕೊಂಡಿರುವುದು ಕಂಡುಬರುತ್ತದೆ. ಫ್ರಾಸಾ 1 ರಿಂದ 30 ರವರು ಪ್ರತಿಕೂಲ ಸಾಕ್ಷಿಗಳಾಗಿ ಪರಿಗಣಿಸಲ್ಪಟ್ಟಿದ್ದರಿಂದ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಿರುವುದಿಲ್ಲ. ಲಭ್ಯವಿರುವ ಸಾಕ್ಷ್ಯಗಳನ್ನು ಪರಿಗಣಿಸಿ, ಆರೋಪಿತರು ಯಾವುದೇ ಅಪರಾಧ ಮಾಡಿರುತ್ತಾರೆ ಎಂದು ಸಾಭೀತಾಗದ ಕಾರಣ ನನ್ನ ಅಭಿಪ್ರಾಯದಲ್ಲಿ ಲಭ್ಯವಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಪರಿಗಣಿಸಿದಾಗ ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ಧ ಮಾಡಲಾದ ದೋಷರೋಪಣೆಯನ್ನು ಸಂಶಯಾತೀತವಾಗಿ ಸಿದ್ಧಪಡಿಸುವುದರಲ್ಲಿ ವಿಫಲರಾಗಿರುತ್ತಾರೆ. **ಆದ್ದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡುತ್ತಾ ಅಂಶ ನಂ.1 ರಿಂದ 7 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.**

22. **ಅಂಶ ನಂ.8:** ಅಂಶ ನಂ.1 ರಿಂದ 7 ನಕಾರಾತ್ಮಕವಾಗಿ ಉತ್ತರಿಸಿದ್ದರಿಂದ ಈ ಪ್ರಕರಣದಲ್ಲಿ ಆರೋಪಿತರು ಬಿಡುಗಡೆಗೆ ಅರ್ಹ ಇರುತ್ತಾರೆ. ಕಾರಣ ಈ ಕೆಳಕಂಡ ಆದೇಶಿರುತ್ತೇನೆ.

## :: ಆದೇಶ ::

**ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಆಧಿಕಾರದಡಿಯಲ್ಲಿ ಆರೋಪಿ ನಂ.1 ರಿಂದ 19 ರವರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.143, 147, 148, 323, 354, 504, 506 ಸಹ ಕಲಂ 149 ಅಡಿಯಲ್ಲಿ ಮಾಡಲಾದ ಆರೋಪಣೆಗಳಿಂದ ಅವರನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.**

**ಆರೋಪಿ ನಂ.1 ರಿಂದ 19 ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆ ಈ ತೀರ್ಪು ನೀಡಿದ ದಿನಾಂಕದ 6 ತಿಂಗಳ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 437-ಎ ರಂತೆ ರದ್ದಾಗುವುದು ಎಂದು ಆದೇಶಿಸಲಾಗಿದೆ.**

(ತೀರ್ಪುನ್ನು ಶೀರ್ಘಲಿಪಿಗಾರರಿಗೆ ನೇರವಾಗಿ ಉಕ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚುಪಡಿಸಿದ ನಂತರ ತಿದ್ದುಪಡಿ ಮಾಡಿ, ಸಹಿ ಮಾಡಿ ಇಂದು ಅಂದರೆ ದಿನಾಂಕ 10 ನೇ ಜನೆವರಿ 2024 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ಶ್ರೀಮತಿ ಗಾಯತ್ರಿ ಹೆಚ್.ಡಿ)**
ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ.
ನರಗುಂದ.

### : ಅನುಬಂಧಗಳು :

**ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರುಃ**

ಪ್ರಾಸಾ 1 : ಶ್ರೀಮತಿ ನೀಲವ್ವ ಕೋಂ ಕಲ್ಲನಗೌಡ ತಿಪ್ಪನಗೌಡ್ರ
ಪ್ರಾಸಾ 2 : ಸಿದ್ದಲಿಂಗಯ್ಯ ತಂದೆ ಗಂಗಾಧರಯ್ಯ ಚಿಕ್ಕಮಠ
ಪ್ರಾಸಾ 3 : ಶ್ರೀಮತಿ ಕಸ್ತೂರಿ ಕೋಂ ಸುಭಾಶ ಕುಲಕರ್ಣಿ
ಪ್ರಾಸಾ 4 : ಶ್ರೀಮತಿ ಹೇಮಾ ಕೋಂ ಪ್ರಕಾಶ ಕುಲಕರ್ಣಿಪಿ
ಪ್ರಾಸಾ 5 : ಶ್ರೀಮತಿ ಬಸವ್ವ ಕೋಂ ಶಿವನಗೌಡ ರಾಯನಗೌಡ್ರ
ಪ್ರಾಸಾ 6 : ಪ್ರಕಾಶ ತಂದೆ ಗೂಳಪ್ಪ ಕುಲಕರ್ಣಿ
ಪ್ರಾಸಾ 7 : ಬಾಳಪ್ಪ ತಂದೆ ಭೀಮರಾಯಪ್ಪ ಬಡಿಗೇರ
ಪ್ರಾಸಾ 8 : ನವೀನ ತಂದೆ ಶಿವನಗೌಡ ರಾಯನಗೌಡ್ರ

ಪ್ರಾಸಾ 9 : ಮಲ್ಲಪ್ಪ @ ಮಲ್ಲಿಕಾರ್ಜುನ ತಂದೆ ಪ್ರಭು ಚವಡಿ

ಪ್ರಾಸಾ 10: ಸುನೀಲ ತಂದೆ ಪ್ರಭು ಚವಡಿ

ಪ್ರಾಸಾ 11: ಮಹೇಶ @ ಮಹೇಶಗೌಡ ತಂದೆ ಸೋಮನಗೌಡ ಪಾನಿಗಟ್ಟಿ

ಪ್ರಾಸಾ 12: ಶಿವು @ ಶಿವರಾಜ ತಂದೆ ಯಲ್ಲಪ್ಪ ಶಿಂಧೆ

ಪ್ರಾಸಾ 13: ಯಲ್ಲಪ್ಪ @ ಯಲ್ಲಪ್ಪಗೌಡ ತಂದೆ ಫಕ್ಕೀರಗೌಡ ಹಿರೇಗೌಡ್ರ @ ಹಡಗಲಿ

ಪ್ರಾಸಾ 14: ಅನೀಲ ತಂದೆ ಶಂಕ್ರಪ್ಪ ಹಂದಿಗೋಳ @ ಕಮಡೊಳ್ಳಿ

ಪ್ರಾಸಾ 15: ಶಿವು @ ಶಿವಾನಂದ ತಂದೆ ಈರಪ್ಪ ಹಂದಿಗೋಳ

ಪ್ರಾಸಾ 16: ಮಾರುತಿ ತಂದೆ ಶಿವಪ್ಪ ಗುರ್ಜರ @ ಹವಾಲ್ದಾರ

ಪ್ರಾಸಾ 17: ಪುಟ್ಟರಾಜ @ ಶಿವರುದ್ರಗೌಡ ತಂದೆ ಶಂಕರಗೌಡ

ಪ್ರಾಸಾ 18: ಪ್ರದೀಪ ತಂದೆ ಶಿವರುದ್ರಪ್ಪ ಮೂಗನೂರ

ಪ್ರಾಸಾ 19: ಚಿದಾನಂದ ತಂದೆ ದೇವೇಂದ್ರಪ್ಪ ಪತ್ತಾರ

ಪ್ರಾಸಾ 20: ಗಣೇಶ @ ಮುತ್ತಪ್ಪ ತಂದೆ ಶಿವರುದ್ರಪ್ಪ ಮನೇನಕೊಪ್ಪ

ಪ್ರಾಸಾ 21: ಮುತ್ತಪ್ಪ @ ಬಸನಗೌಡ ತಂದೆ ಕಲ್ಲನಗೌಡ ತಿಪ್ಪನಗೌಡ

ಪ್ರಾಸಾ 22: ಗಡಿಯಪ್ಪ @ ಗಡಿಯಪ್ಪಗೌಡ ತಂದೆ ಬಸನಗೌಡ ಮರಿಗೌಡ್ರ

ಪ್ರಾಸಾ 23: ಅಪ್ಪು@ ವೀರನಗೌಡ ತಂದೆ ಶಿವನಗೌಡ ಮರಿಗೌಡ್ರ

ಪ್ರಾಸಾ 24: ಹನಮಂತ @ ಹನಮಂತಗೌಡ ತಂದೆ ಗುರನಗಬಡ ಚಿಗರಿ @ ಕಲ್ಲನಗೌಡರ

ಪ್ರಾಸಾ 25: ತಮ್ಮನಗೌಡ ತಂದೆ ಬಸನಗೌಡ ತಿಪ್ಪನಗೌಡ್ರ

ಪ್ರಾಸಾ 26: ಶಿವಾನಂದ ತಂದೆ ಬಸಪ್ಪ ಕಲಾದಗಿ

ಪ್ರಾಸಾ 27: ಚಿನ್ನಾಸಾಬ ತಂದೆ ಅಬ್ದುಲಸಾಬ ಮುಲ್ಲಾನವರ

ಪ್ರಾಸಾ 28: ಮುದರಡ್ಡಿ ತಂದೆ ಭೀಮರಡ್ಡಿ ಯರಗಟ್ಟಿ

ಪ್ರಾಸಾ 29: ಶಂಕ್ರಪ್ಪ ತಂದೆ ಬಸಪ್ಪ ಜುಮ್ಮಣ್ಣವರ

ಪ್ರಾಸಾ 30: ರಾಜು @ ಶಿವರಾಜ ತಂದೆ ವೀರಪ್ಪ ಅಗಸರ @ ಮಡಿವಾಳರ

**ಆರೋಪಿತರ ಪರ ಸಾಕ್ಷಿಗಳ ವಿವರಃ**

--ಇಲ್ಲಾ---

**ಅಭಿಯೋಜನೆಯ ಪರ ಗುರುತಿಸಲಾದ ದಾಖಲೆಗಳ ಪಟ್ಟಿಃ**

| | |
|---|---|
| ನಿಪಿ 1 | : ದೂರು |
| ನಿಪಿ 2 | : ಘಟನಾ ಜಾಗೆ ಪಂಚನಾಮೆ |
| ನಿಪಿ 2(ಎ) | : ಚಾಸಾ 3 ರವರ ಸಹಿ |

| | |
|---|---|
| ನಿಪಿ 3 | : ಭಾವಚಿತ್ರ |
| ನಿಪಿ 4 | : ಚಾಸಾ 4 ರವರ ಹೇಳಿಕೆ |
| ನಿಪಿ 5 | : ಚಾಸಾ 5 ರವರ ಹೇಳಿಕೆ |
| ನಿಪಿ 6 | : ಚಾಸಾ 6 ರವರ ಹೇಳಿಕೆ |
| ನಿಪಿ 7 | : ಚಾಸಾ 7 ರವರ ಹೇಳಿಕೆ |
| ನಿಪಿ 8 | : ಚಾಸಾ 8 ರವರ ಹೇಳಿಕೆ |
| ನಿಪಿ 9 | : ಚಾಸಾ 9 ರವರ ಹೇಳಿಕೆ |
| ನಿಪಿ 10 | : ಚಾಸಾ 10 ರವರ ಹೇಳಿಕೆ |
| ನಿಪಿ 11 | : ಚಾಸಾ 11 ರವರ ಹೇಳಿಕೆ |
| ನಿಪಿ 12 | : ಚಾಸಾ 13 ರವರ ಹೇಳಿಕೆ |
| ನಿಪಿ 13 | : ಚಾಸಾ 14 ರವರ ಹೇಳಿಕೆ |
| ನಿಪಿ 14 | : ಚಾಸಾ 15 ರವರ ಹೇಳಿಕೆ |
| ನಿಪಿ 15 | : ಚಾಸಾ 18 ರವರ ಹೇಳಿಕೆ |
| ನಿಪಿ 16 | : ಚಾಸಾ 20 ರವರ ಹೇಳಿಕೆ |
| ನಿಪಿ 17 | : ಚಾಸಾ 21 ರವರ ಹೇಳಿಕೆ |
| ನಿಪಿ 18 | : ಚಾಸಾ 22 ರವರ ಹೇಳಿಕೆ |
| ನಿಪಿ 19 | : ಚಾಸಾ 23 ರವರ ಹೇಳಿಕೆ |
| ನಿಪಿ 20 | : ಚಾಸಾ 24 ರವರ ಹೇಳಿಕೆ |
| ನಿಪಿ 21 | : ಚಾಸಾ 25 ರವರ ಹೇಳಿಕೆ |
| ನಿಪಿ 22 | : ಚಾಸಾ 26 ರವರ ಹೇಳಿಕೆ |
| ನಿಪಿ 23 | : ಚಾಸಾ 27 ರವರ ಹೇಳಿಕೆ |
| ನಿಪಿ 24 | : ಚಾಸಾ 28 ರವರ ಹೇಳಿಕೆ |
| ನಿಪಿ 25 | : ಚಾಸಾ 29 ರವರ ಹೇಳಿಕೆ |
| ನಿಪಿ 26 | : ಚಾಸಾ 30 ರವರ ಹೇಳಿಕೆ |
| ನಿಪಿ 27 | : ಚಾಸಾ 31 ರವರ ಹೇಳಿಕೆ |
| ನಿಪಿ 28 | : ಚಾಸಾ 32 ರವರ ಹೇಳಿಕೆ |
| ನಿಪಿ 29 | : ಚಾಸಾ 33 ರವರ ಹೇಳಿಕೆ |

ನಿಪಿ 30 : ಚಾಸಾ 17 ರವರ ಹೇಳಿಕೆ

ನಿಪಿ 31 : ಚಾಸಾ 19 ರವರ ಹೇಳಿಕೆ

**ಆರೋಪಿತರ ಪರ ನಿಶಾನೆ ಆಗಿ ಗುರುತಿಸಿದ ದಾಖಲೆಗಳ ಪಟ್ಟಿಃ**

--ಇಲ್ಲಾ--

**ಅಭಿಯೋಜನೆಯ ಪರ ಅಮಾನತ್ ಪಡಿಸಲಾದ ಮುದ್ದೆಮಾಲುಗಳ ಪಟ್ಟಿ**

--ಇಲ್ಲಾ--

**(ಶ್ರೀಮತಿ ಗಾಯತ್ರಿ ಹೆಚ್.ಡಿ)**
ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ.
ನರಗುಂದ.